**1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ನಂಜನಗೂಡು**

**ಸಿ.ಸಿಃ 1145/2015**

| | | | |
|---|---|---|---|
| ಸಾಕ್ಷಿದಾರರ ಹೆಸರು | | ಮಹೇಶ್ ಕುವಾರ್ ಪಿ. | ಪ್ರಾಸಾಃ 2 |
| ತಂದೆಯ ಹೆಸರು | | ಪಾಂಡು ರಂಗ ಶೆಟ್ಟಿ | ಚಾಸಾಃ 1 |
| ವಯಸ್ಸು | | 50 ವರ್ಷ | |
| ಕೆಲಸ | | ಉಪಆಯುಕ್ತಕರು ಅಬಕಾರಿ ಇಲಾಖೆ ಮೈಸೂರು | ಸಾ ಪ್ರ ಬೋ |
| ವಾಸ | | ಮೈಸೂರು | ದಿಃ 19.12.2022 |

**ಮುಖ್ಯ ವಿಚಾರಣೆ ಎ.ಪಿ.ಪಿ.ಯವರಿಂದಃ**

ನಾನು 2012 ರಿಂದ ಸೆಪ್ಟೆಂಬರ್ 2015 ರವರೆಗೂ ಅಬಕಾರಿ ಅಧೀಕ್ಷಕರಾಗಿ Ms// Bannari Amman Sugars Limited Distillery unit, Nanjangudu ರಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಸದರಿ ಘಟಕದಲ್ಲಿ ಚಾಸಾ-2 ರವರು ಅಬಕಾರಿ ನಿರೀಕ್ಷಕರು ಮತ್ತು ಚಾಸಾ-3 ಅಬಕಾರಿ ಉಪನಿರೀಕ್ಷಕರಾಗಿದ್ದರು. ಚಾಸಾ -4 ಅಬಕಾರಿ ರಕ್ಷಕರಾಗಿದ್ದರು.

ಆರೋಪಿತರು ಗೊತ್ತು. ದಿನಾಂಕ 27.06.2014 ರಂದು ಸುಮಾರು ಮಧ್ಯಾಹ್ನ 2.15 ಗಂಟೆಗೆ ಕರ್ತವ್ಯಕ್ಕೆ ಹಾಜರಾಗಲು ನಾನು ಮತ್ತು ಚಾಸಾ-2 ರಿಂದ 4 ಇಲಾಖಾ ವಾಹನ ಸಂಖ್ಯೆ KA-03-Z-4792 ರಲ್ಲಿ ಚಾಲಕರಾದ ಸಿದ್ದರಾಜು ರವರೊಂದಿಗೆ ಹೋಗುತ್ತಿದ್ದಾಗ ಬನ್ನಾರಿ ಅಮ್ಮನ್ ಶುಗರ್ ಫ್ಯಾಕ್ಟರಿಯ ಮುಖ್ಯ ದ್ವಾರದ ಬಳಿ ಸುಮಾರು 10-12 ಜನ ಹೆಂಗಸರು ನಮ್ಮನ್ನು ಒಳಗೆ ಹೋಗದಂತೆ ತಡೆದಿರುತ್ತಾರೆ. ನಂತರ ನಾನು ವಾಹನದಿಂದ ಇಳಿದು ನಮ್ಮ ಸರ್ಕಾರಿ ಕರ್ತವ್ಯಕ್ಕೆ ಅಡ್ಡಿ ಪಡಿಸದೇ ಒಳಗೆ ಹೋಗಲು ಬಿಡುವಂತೆ ಕೇಳಿದೆ. ಆಗ ಧರಣಿ ನಿರತ ಆರೋಪಿತರು ಸದರಿ 1 ರಿಂದ 7 ನೇ ಮಹಿಳ ಆರೋಪಿತರಿಗೆ ಯಾರೇ ಆದರೂ ಒಳಗೆ ಬಿಡಬೇಡಿ ಎಂದು ಕುಮ್ಮಕ್ಕು ನೀಡಿರುತ್ತಾರೆ. ಆರೋಪಿತರು ನಮ್ಮ ಕಛೇರಿಗೆ ಹೋಗಲು ಬಿಡದೇ ನಮ್ಮ ಕರ್ತವ್ಯಕ್ಕೆ ಅಡ್ಡಿ ಪಡಿಸಿರುತ್ತಾರೆ. ಈ ಬಗ್ಗೆ ನಾನು ಬದನವಾಳು ಠಾಣೆಗೆ ಆರೋಪಿತರ ವಿರುದ್ಧ ದೂರು ನೀಡಿದ್ದೇನೆ.

ಸಾಕ್ಷಿಗೆ ಒಂದು ದಾಖಲಾತಿ ತೋರಿಸಿದ್ದು ಅದು ದೂರಾಗಿದ್ದು, ದೂರಿನಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ದೂರನ್ನು ನಿಪಿ-2 ಎಂದು , ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ದಿನಾಂಕ 29.06.2014 ರಂದು ಪ್ರಕರಣದ ಸಂಬಂದ ನನ್ನ ಮರುಹೇಳಿಕೆ ನೀಡಿರುತ್ತಾರೆ. ನಮ್ಮ ಕರ್ತವ್ಯಕ್ಕೆ ಅಡ್ಡಿ ಪಡಿಸಿದ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

1 ರಿಂದ 7, 9 ಮತ್ತು 16 ನೇ ಆರೋಪಿತರು ಗೈರು ಹಾಜರು ಇದ್ದು, ಆರೋಪಿತರ ಗುರುತಿಸುವಿಕೆಯ ಬಗ್ಗೆ ಆರೋಪಿತರ ಪರ ವಕೀಲರು ತಕರಾರು ಇರುವುದಿಲ್ಲ ಎಂದು ನುಡಿಯುತ್ತಾರೆ.

ಆರೋಪಿತರು ಗುಂಪು ಕಟ್ಟಿಕೊಂಡು ನಮ್ಮನ್ನು ಸುತ್ತುವರೆದಿರುತ್ತಾರೆ. ಆರೋಪಿತರು ತಮ್ಮ ಬೇಡಿಕೆ ಈಡೇರಿಕೆಗಾಗಿ ಧರಣಿ ಮಾಡುತ್ತಿದ್ದರು.

**ಪಾಟೀ ಸವಾಲು: ಆರೋಪಿ ಪರ ಶ್ರೀ ಆರ್.ಎಂ.ಎಸ್. ವಕೀಲರಿಂದ:**

ಬನ್ನಾರಿ ಅಮ್ಮನ್ ಫ್ಯಾಕ್ಟರಿಯಲ್ಲಿ ಎರಡು ಪಾಳಿಯಲ್ಲಿ ಕಾರ್ಮಿಕರು ಕರ್ತವ್ಯ ನಿರ್ವಹಿಸುತ್ತಾರೆ. ಆದರೆ ಪ್ರತಿ ಪಾಳಿಯಲ್ಲಿ ಎಷ್ಟು ಜನ ಕರ್ತವ್ಯ ನಿರ್ವಹಿಸುತ್ತಾರೆ ಎಂದು ನನಗೆ ಗೊತ್ತಿಲ್ಲ. ಪಾಳಿಯ ಸಮಯ ನನಗೆ ಗೊತ್ತಿಲ್ಲ. ಪ್ರತಿ ಪಾಳಿಯಲ್ಲಿ ಎಷ್ಟು ಜನ ಗಂಡಸರು ಮತ್ತು ಹೆಂಗಸರು ಇರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಫ್ಯಾಕ್ಟರಿಯಲ್ಲಿ ಸುತ್ತಮುತ್ತಲಿನ ಗ್ರಾಮಸ್ಥರು ಕೆಲಸ ಮಾಡುತ್ತಾರೆ. ಮಲ್ಲುಪುರ ಗ್ರಾಮಸ್ಥರು ಸದರಿ ಫ್ಯಾಕ್ಟರಿಯಲ್ಲಿ ಹೆಚ್ಚಾಗಿ ಇದ್ದಾರೆ. ಮಲ್ಲುಪುರ ಗ್ರಾಮಸ್ಥರು ಎಷ್ಟು ಜನ ಸದರಿ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ. ಮಲ್ಲುಪುರ ಗ್ರಾಮಸ್ಥರು ಪ್ರತಿ ಪಾಳಿಯಲ್ಲಿ ಎಷ್ಟು ಜನ ಕೆಲಸ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ. ನನಗೆ ಯಾವ ಊರಿನ ಗ್ರಾಮಸ್ಥರು ಎಷ್ಟು ಎಷ್ಟು ಜನ ಸದರಿ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಫ್ಯಾಕ್ಟರಿಯಲ್ಲಿ ಕೆಲಸ ಮಾಡುವ ಕಾರ್ಮಿಕರ ಹೆಸರುಗಳು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ದೂರಿನಲ್ಲಿ ಹೇಳಿರುವವರ ಹೆಸರುಗಳು ಮಾತ್ರ ಗೊತ್ತು ಎಂದು ನುಡಿಯುತ್ತಾರೆ. ಆರೋಪಿತರ ಹೆಸರು ಮತ್ತು ವಿಳಾಸಗಳನ್ನು ಹೇಗೆ ತಿಳಿದುಕೊಂಡಿರಿ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನಾನು ಸದರಿ ಫ್ಯಾಕ್ಟರಿಯಲ್ಲಿ 2 ವರ್ಷಗಳು ಕೆಲಸ ಮಾಡಿದ್ದರಿಂದ ನನಗೆ ತಿಳಿದಿತ್ತು ಮತ್ತು ಇತರ ಸಿಬ್ಬಂದಿಯವರು ತಿಳಿಸಿರಬಹದು. ಸದರಿ ಸಿಬ್ಬಂದಿಯವರ ಹೆಸರು ವಿಳಾಸ ನನಗೆ ಈಗ ನೆನಪಿಲ್ಲ. ನನಗೆ ಆರೋಪಿತರು ಯಾವ ಊರಿನವರು ಎಂದು ಈಗ ಹೇಳಲು ಆಗುವುದಿಲ್ಲ. ನನ್ನ ಸಿಬ್ಬಂದಿ ಹೇಳಿದ್ದರಿಂದ್ದಾಗಿ ಅವರ ಹೆಸರು ಮತ್ತು ಊರನ್ನು ದೂರಿನಲ್ಲಿ ನಮೂದಿಸಿದ್ದೇನೆ.

ನಮ್ಮ ದೈನಂದಿನ ಕಛೇರಿ ಅವಧಿ ಬೆಳಗ್ಗೆ 10.00 ರಿಂದ 5.30. ನಮ್ಮ ಕೆಲಸವು ಕಛೇರಿಯ ಒಳಗಡೆಯೇ ಇರುತ್ತದೆ. ನಮ್ಮ ಇಲಾಖೆಯಿಂದ ಬನ್ನಾರಿ ಅಮ್ಮನ್ ಶುಗರ್ ಫ್ಯಾಕ್ಟರಿ ಡಿಸ್ಟಿಲರಿಯಲ್ಲಿ 5 ಜನ ಕೆಲಸ ಮಾಡುತ್ತೇವೆ. ಮಧ್ಯಾಹ್ನ ಊಟಕ್ಕೆ ನಾವು ಗೆಸ್ಟ್ ಹೌಸ್ ಗೆ ಊಟಕ್ಕೆ ಹೋಗುತ್ತೇವೆ. ಊಟಕ್ಕೆ ಹೋಗುವಾಗ ನಾವು ರಿಜಿಸ್ಟರ್ ನಲ್ಲಿ ನಮೂದು ಮಾಡಿ ಹೋಗಬೇಕು ಎಂದರೆ ಸರಿಯಲ್ಲ. ಬನ್ನಾರಿ ಅಮ್ಮನ್ ಶುಗರ್ ಫ್ಯಾಕ್ಟರಿಯ ಮುಖ್ಯ ದ್ವಾರದಿಂದ ಒಳಭಾಗದಲ್ಲಿ ಸುಮಾರು 1 ಕಿ.ಮೀಟರ್ ಆದ ನಂತರ ನಮ್ಮ ಯುನಿಟ್ ಗೆ ಹೋಗುವಾಗ ಮತ್ತೊಂದು ಗೇಟ್ ಇದೆ. ಯಾವುದೇ ಧರಣಿ ಮಾಡುವಾಗ ಕಾರ್ಮಿಕರು ಮುಖ್ಯ ದ್ವಾರದ ಒಳ ಭಾಗದ ಗೇಟ್ ಬಳಿ ಮುಷ್ಕರ ಮಾಡುತ್ತಾರೆ ಎಂದರೆ ಸರಿಯಲ್ಲ.

ಮುಖ್ಯ ದ್ವಾರದಿಂದ 1 ಕಿ.ಮೀಟರ್ ಆದ ನಂತರ ಬಲ ಭಾಗಕ್ಕೆ ತಿರುಗಿಕೊಂಡರೆ ನಮ್ಮ ಕಛೇರಿ ಬರುತ್ತದೆ ಎಂದರೆ ಸರಿ. ಮುಖ್ಯ ದ್ವಾರದಿಂದ 100 ಮೀಟರ್ ಅಂತರದಲ್ಲಿ ಇನ್ನೊಂದು ಗೇಟ್ ಇದೆ ಎಂದರೆ ನನಗೆ ಗೊತ್ತಿಲ್ಲ. ಘಟನೆ ನಡೆಯಿತು ಎನ್ನಲಾದ ದಿನ ಕಛೇರಿಗೆ ನಾನು ಮಧ್ಯಾಹ್ನ 2.15 ಗಂಟೆಗೆ ಹೋಗುತ್ತಿದ್ದ ಕಾರಣ ನಾನು United Breviaries Distillery ಯಲ್ಲಿ ಹೆಚ್ಚುವರಿ ಪ್ರಭಾರದಲ್ಲಿ ಇದ್ದು ಅಲ್ಲಿಗೆ ಹೋಗಿದ್ದೆ. ಆ ದಿನ ಬೆಳಗ್ಗೆ ಬನ್ನಾರಿ ಅಮ್ಮನ್ ಶುಗರ್ ಫ್ಯಾಕ್ಟರಿಯ Distillery ಯಲ್ಲಿ ನಮ್ಮ ಇಲಾಖೆಯ ಯಾವ ಸಿಬ್ಬಂದಿ ಕೆಲಸ ಮಾಡಿದ್ದರು ಎಂದು ನನಗೆ ನೆನಪಿಲ್ಲ. ಬನ್ನಾರಿ ಅಮ್ಮನ್ ಶುಗರ್ ಫ್ಯಾಕ್ಟರಿಯಲ್ಲಿ 500-1,000 ಜನ ಕೆಲಸ ಮಾಡುತ್ತಾರೆ. ಘಟನೆ ನಡೆದ ದಿನ ಮುಖ್ಯ ಗೇಟ್ ನಲ್ಲಿ 40-50 ಜನ ಮಾತ್ರ ಇದ್ದರು. ಆ ದಿನ ಮುಖ್ಯ ದ್ವಾರದ ಬಳಿ ಆರೋಪಿತರು ಇರಲಿಲ್ಲ ಅವರು ಒಳ ಭಾಗದ ಗೇಟ್ ನಲ್ಲಿ ಇದ್ದರು ಎಂದರೆ ಸರಿಯಲ್ಲ. ಆರೋಪಿತರುಗಳು ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ನಮ್ಮ ವಾಹನವನ್ನು ಅಡ್ಡಗಟ್ಟಿ ಸರ್ಕಾರಿ ಕೆಲಸಕ್ಕೆ ಅಡ್ಡಿ ಪಡಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಕೃತ್ಯ ನಡೆದ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಕಂಪನಿಯ ಆಡಳಿತ ಮಂಡಳಿಯವರ ಮಾತನ್ನು ಕೇಳಿ ಆರೋಪಿತರ ವಿರುದ್ಧ ಸುಳ್ಳು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಅಪರಾಧವನ್ನು ಎಸಗಲು ಕುಮ್ಮಕ್ಕು ನೀಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಓ**

**1 ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ**

**ನಂಜನಗೂಡು**